## ಕ್ರೀಡಾಂಗಣದಲ್ಲಿ ಒಳಾಂಗಣ ನಿರ್ಮಾಣ

**376(1021); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)**

ಅ) ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಒಳಾಂಗಣ ಬ್ಯಾಡ್ಮಿಂಟನ್ ಹಾಲ್ ನಿರ್ಮಾಣ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಕಾಮಗಾರಿಯನ್ನು ಯಾರಿಗೆ ನೀಡಲಾಗಿದೆ;

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

**ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಹಾಗೂ ಮೀನುಗಾರಿಕೆ ಸಚಿವರು)**

ಅ) ಹೌದು

ಆ) ₹ 300.00 ಲಕ್ಷಗಳು

ಇ) ಈ ಕಾಮಗಾರಿಯನ್ನು ಶ್ರೀ ಶಿವಾನಂದ ಎನ್.ಕಲಬುರ್ಗಿ, ಪಿಡಬ್ಲ್ಯೂಡಿ ಕ್ಲಾಸ್–1 ಕಂಟ್ರ್ಯಾಕ್ಟರ್, ನಂ.2723, 17ನೇ ಬಿ ಕ್ರಾಸ್, 5ನೇ ಮೇನ್, ಬನಶಂಕರಿ–2ನೇ ಹಂತ, ಬೆಂಗಳೂರು ಇವರಿಗೆ ನೀಡಲಾಗಿದೆ.

ಈ) ಈ ಕಾಮಗಾರಿಯನ್ನು ಈಗಾಗಲೇ ದಿನಾಂಕ: 01–05–2014ರಂದು ಪೂರ್ಣಗೊಳಿಸಲಾಗಿದೆ.

## ಗ್ರಾಮಲೆಕ್ಕಿಗರಿಗೆ ಲ್ಯಾಪ್‌ಟಾಪ್ ಒದಗಿಸುವುದು

**377(1022); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮಿ ಲೇಜಾಟ್)**

ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮಲೆಕ್ಕಿಗರ ಸಂಖ್ಯೆ ಎಷ್ಟು;

ಆ) ಎಲ್ಲಾ ಗ್ರಾಮಲೆಕ್ಕಿಗರಿಗೆ ಲ್ಯಾಪ್‌ಟಾಪ್ ಒದಗಿಸಲು ಸರ್ಕಾರ ನಿರ್ಧರಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಈ) ಇದಕ್ಕಾಗಿ ಖರ್ಚಾಗುವ ಹಣವೆಷ್ಟು;

ಉ) ಈ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಅನುಸರಿಸುವ ನಿಯಮಗಳೇನು?

**ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)**

ಅ) ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಾಮಲೆಕ್ಕಿಗರ ಸಂಖ್ಯೆ:8,794

ಆ) ಗ್ರಾಮಲೆಕ್ಕಿಗರಿಗೆ ಪ್ರಾಯೋಗಿಕವಾಗಿ ಲ್ಯಾಪ್‌ಟ್ಯಾಪ್ ಒದಗಿಸುವ ಬಗ್ಗೆ ಚಿಂತನೆ ಮಾಡಲಾಗುತ್ತಿದೆ.

ಇ) ರೈತರಿಗೆ ಸಂಬಂಧಪಟ್ಟಂತೆ ಬೆಳೆ ವಿಮೆ, ಬೆಳೆ ಸಾಲ, ಪರಿಹಾರ ವಿತರಣೆ ಇತ್ಯಾದಿ ಯೋಜನೆಗಳಿಗೆ ಸಂಬಂಧಪಟ್ಟ ಅರ್ಜಿ ಸಲ್ಲಿಕೆಯಲ್ಲಿನ ವಿಳಂಬವನ್ನು ತಪ್ಪಿಸಲು ಹಾಗೂ ಭೂದಾಖಲೆಗಳ ವಿವರಗಳನ್ನು ಶೇಖರಿಸಲು ಮತ್ತು ಅಗತ್ಯ ಪ್ರಮಾಣ ಪತ್ರಗಳನ್ನು ತ್ವರಿತವಾಗಿ ವಿತರಿಸುವ ದೃಷ್ಟಿಯಿಂದ ಈ ಚಿಂತನೆಯನ್ನು ಮಾಡಲಾಗುತ್ತಿದೆ.

ಈ) ಅಂತಿಮ ತೀರ್ಮಾನ ಆಗಿರುವುದಿಲ್ಲ.

ಉ) ಅಂತಿಮ ತೀರ್ಮಾನದ ಬಳಿಕ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.